# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 346 |
| ಸದಸ್ಯರ ಹೆಸರು | : | ಶ್ರೀ ರವಿಕುಮಾರ್ ಎನ್<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 10-03-2025 |
| ಉತ್ತರಿಸುವ ಸಚಿವರು | : | ಮಾನ್ಯ ಇಂಧನ ಸಚಿವರು |

****

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | 2015, ಜನವರಿ 9ರ ಬಳಿಕ ಬೆಂಗಳೂರು ನಗರ ಜಿಲ್ಲೆಯ ನೀಲಸಂದ್ರ ಗ್ರಾಮದ ಸರ್ವ ನಂ. 79ರಲ್ಲಿ 15 ಎಕರೆ 12ಗುಂಟೆ ಜಮೀನಿನಲ್ಲಿ ಅಕ್ರಮವಾಗಿ ನಿರ್ಮಿಸಿರುವ ಕಟ್ಟಡಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಿದ ಬೆಸ್ಕಾಂ ಅಧಿಕಾರಿಗಳನ್ನು ಅಮಾನತ್ತು ಮಾಡಿ ಇಲಾಖೆ ಕ್ರಮಕೈಗೊಳ್ಳಲಾಗಿದೆಯೆ: ಇಲ್ಲದಿದ್ದಲ್ಲಿ ಕಾರಣವೇನು? | ಸಹಾಯಕ ಆಯುಕ್ತರು, ಮುಜುರಾಯಿ ಕಾಮಗಾರಿಗಳು, ನಗರ ಸಭಾವಲಯ, ಬೆಂಗಳೂರು ರವರು ಪತ್ರ ಸಂಖ್ಯೆ: ಮುಜ್(1) ಸಿಆರ್: 84/2014-15 ದಿನಾಂಕ 30.11.2020 ರಲ್ಲಿ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಬೆವಿಕಂರವರಿಗೆ ಬೆಂಗಳೂರು ನಗರ ತಿಗಳರಪೇಟೆ ಶ್ರೀಧರ್ಮರಾಯ ಸ್ವಾಮಿ ದೇವಾಲಯಕ್ಕೆ ಸೇರಿದ ನೀಲಸಂದ್ರ ಗ್ರಾಮದ ಸರ್ವೇ ನಂ 79 ರಲ್ಲಿ 15 ಎಕರೆ 12 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ಅನಧಿಕೃತವಾಗಿ ನಿರ್ಮಿಸಿರುವ ಮನೆಗಳಿಗೆ ಯಾವ ದಾಖಲೆಗಳನ್ನು ಪಡೆದು ವಿದ್ಯುತ್ ಸಂಪರ್ಕ ನೀಡಿರುತ್ತೀರಿ ಸದರಿ ದಾಖಲೆಗಳೊಂದಿಗೆ ವಿದ್ಯುತ್ ಸಂಪರ್ಕ ಪರವಾನಿಗೆಯ ದೃಢೀಕೃತ ಪ್ರತಿಯನ್ನು ತ್ವರಿತವಾಗಿ ನೀಡಲು ಕೋರಿರುತ್ತಾರೆ.<br><br>ಆದರೆ, ಬೆಂಗಳೂರು ನಗರ ಜಿಲ್ಲೆಯ ನೀಲಸಂದ್ರ ಗ್ರಾಮದ ಸರ್ವೆ ನಂ. 79ರಲ್ಲಿ, ಜನವರಿ-2015 ರಿಂದ 30.11.2020 ರವರೆಗೆ ಒಟ್ಟು 229 ಸಂಖ್ಯೆಯ ಸ್ಥಾವರಗಳಿಗೆ ಸೇಲ್ ಡೀಡ್ (ಮಾರಾಟ ಪತ್ರ), ಸ್ವತ್ತಿನ ಮೇಲೆ ಋಣಭಾರ ರಹಿತ ಪತ್ರಗಳ ಆಧಾರದ ಮೇಲೆ ಹಾಗೂ ಕೆಇಆರ್ ಸಿ ಕಂಡಿಷನ್ ಆಫ್ ಪವರ್ ಸಪ್ಲೈನ ಸೆಕ್ಷನ್ 4ರನ್ವಯ ಮುಜುರಾಯಿ ಇಲಾಖೆಯಿಂದ ಪತ್ರ (ಪತ್ರದ ದಿನಾಂಕ 30.11.2020) ಸ್ವೀಕೃತವಾಗುವ ಮುನ್ನ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿರುತ್ತದೆ.<br><br>ದಿನಾಂಕ 30.11.2020 ರ ಪತ್ರದಿಂದ, ಬೆವಿಕಂಗೆ ಸದರಿ ಸರ್ವೇ ನಂ. ವಿವಾದಿತ ಸ್ಥಳವಾಗಿರುವುದಾಗಿ ಗಮನಕ್ಕೆ ಬಂದಿರುತ್ತದೆ. ಈ ಪತ್ರ ದಿನಾಂಕದ ನಂತರದಲ್ಲಿ ಯಾವುದೇ ಕಟ್ಟಡಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಿರುವುದಿಲ್ಲ.<br><br>ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ S3 ಉಪವಿಭಾಗ ಬೆವಿಕಂರವರು ಉಪ ಆಯುಕ್ತರು ಬಿ.ಬಿ.ಎಂ.ಪಿಗೆ ಬೆಂಗಳೂರು ರವರಿಗೆ ದಿನಾಂಕ 22.09.2021, 18.08.2022 ಮತ್ತು 09.03.2023 ರಲ್ಲಿ ಪತ್ರದ ಮುಖಾಂತರ ಸದರಿ ಸ್ವತ್ತಿನ ನಕ್ಷೆಯ ಗಡಿಯನ್ನು ಹಾಗೂ ಬಿ.ಬಿ.ಎಂ.ಪಿ ಸಿಬ್ಬಂದಿಯನ್ನು ಬೆವಿಕಂ ಸಿಬ್ಬಂದಿಯೊಂದಿಗೆ ಸಮೀಕ್ಷೆ ಮಾಡುವ ಸಲುವಾಗಿ ನಿಯುಕ್ತಿಗೊಳಿಸಲು ಕೋರಿರುತ್ತಾರೆ.<br><br>ಸದರಿ ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ 20.06.2022 ರಲ್ಲಿ ಕಾರ್ಯನಿರ್ವಾಹಕ ಇಂಜಿನಿಯರ್ ಬೆವಿಕಂ ಕೋರಮಂಗಲ ವಿಭಾಗ ಬೆಂಗಳೂರು ರವರು ಶ್ರೀ ಧರ್ಮರಾಯ ಸ್ವಾಮಿ ದೇವಾಲಯಕ್ಕೆ ಸೇರಿದ ಬೆಂಗಳೂರು ನಗರ ಜಿಲ್ಲೆಯ ನೀಲಸಂದ್ರ ಗ್ರಾಮ ಸರ್ವೆ ನಂ 79 ರಲ್ಲಿ 15 ಎಕರೆ 12 ಗುಂಟೆ ಜಮೀನಿನಲ್ಲಿ |
| (ಆ) | ಸದರಿ ಸರ್ವೇ ನಂ.ನ ಭೂಮಿಯು ಮುಜುರಾಯಿ ಇಲಾಖೆಯ ಜಾಗ ಎಂಬುದಾಗಿ ಇಲಾಖೆಯ ಗಮನಕ್ಕೆ ಯಾವಾಗ ಬಂದಿರುತ್ತದೆ. (ವಿವರ | |
| ಇ) | ಬೆಂಗಳೂರು ನಗರ ಜಿಲ್ಲೆಯ ನೀಲಸಂಧ್ರ ಗ್ರಾಮದ ಸರ್ವೆ ನಂ.79ರಲ್ಲಿನ ಎಷ್ಟು ಮನೆಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ, ಕಲ್ಪಿಸದಿದ್ದಲ್ಲಿ, ಯಾವ ಆಧಾರದಲ್ಲಿ ವಿದ್ಯುತ್ ಸಂಪರ್ಕ ನೀಡಲಾಗಿದೆ. | |

| | | |
|---|---|---|
| | | ಅನಧಿಕೃತ ಒತ್ತುವರಿದಾರರನ್ನು ಗುರುತಿಸಲು ನಿರ್ದಿಷ್ಟವಾದ ವಿವರವನ್ನು ನೀಡಿದಲ್ಲಿ ಹಾಗೂ ಮುಜರಾಯಿ ಇಲಾಖೆಯಿಂದ ಸಿಬ್ಬಂದಿಯನ್ನು ಬೆವಿಕಂ ಸಿಬ್ಬಂದಿಯೊಂದಿಗೆ ಸಮೀಕ್ಷೆ ಮಾಡುವ ಸಲುವಾಗಿ ನಿಯುಕ್ತಿಗೊಳಿಸಲು ಕೋರಿರುತ್ತಾರೆ. (ಸದರಿ ಪ್ರತಿಗಳನ್ನು ಲಗತ್ತಿಸಲಾಗಿದೆ).<br><br>ಈ ಮೇಲಿನ ಎಲ್ಲಾ ಪ್ರಕ್ರಿಯೆಯಿಂದಾಗಿ ದಿನಾಂಕ 03.03.2025, 4.03.2025 ಮತ್ತು 05.03.2025 ರಂದು ಸಹಾಯಕ ಆಯುಕ್ತರು, ಮುಜರಾಯಿ ಕಾಮಗಾರಿಗಳು, ಮುನ್ಸಿಫಲ್ ಕಾರ್ಪೊರೇಷನ್ ವಲಯ, ಭೂಮಾಪಕರು, ಕಂದಾಯ ಇಲಾಖೆ, ಸಹಾಯಕ ಕಾರ್ಯನಿರ್ವಾಹಕ ಇಂಜನಿಯರ್(ವಿ), ಎಸ್-3, ಆಸ್ಟೀನ್ ಟೌನ್ ಉಪವಿಭಾಗ ಹಾಗೂ ಸಹಾಯಕ ಇಂಜಿನಿಯರ್, ವಾ & ಪಾ ಘಟಕ, ಆಸ್ಟೀನ್ ಟೌನ್ ಅಧಿಕಾರಿಗಳ ಸಮ್ಮುಖದಲ್ಲಿ ಜಂಟಿ ತಪಾಸಣೆ ನಡೆಸಿದ್ದು, ನೀಲಸಂದ್ರ ಗ್ರಾಮದ ಸರ್ವೆ ನಂಬರ್ 79 ರ ಪರಿವ್ಯಾಪ್ತಿಯಲ್ಲಿ ಗುರುತಿಸಿದ್ದು, ಸದರಿ ವ್ಯಾಪ್ತಿಯಲ್ಲಿ ವಿದ್ಯುತ್ ಸಂಪರ್ಕ ಕಲ್ಪಿಸಿದ ಮನೆಗಳು ಮತ್ತು ಅದರ ಆರ್. ಆರ್ ಸಂಖ್ಯೆಗಳನ್ನು ಗುರುತಿಸಲಾಗಿದ್ದು, ದಿನಾಂಕ 02.01.1982 ರಿಂದ 30.11.2020 ರವರೆಗೆ 999 ಸಂಖ್ಯೆಯ ಆರ್. ಆರ್ ಸಂಖ್ಯೆಗಳು ಕಂಡು ಬಂದಿರುತ್ತದೆ. |
| ಈ) | ದೇವಸ್ಥಾನದ ಜಾಗದಲ್ಲಿ ಅಕ್ರಮವಾಗಿ ಒತ್ತುವರಿ ಮಾಡಿ ನಿರ್ಮಿಸಿದ ಅನಧಿಕೃತ ಕಟ್ಟಡಗಳಿಗೆ ವಿದ್ಯುತ್ ಸಂಪರ್ಕ ನೀಡಲು ಕಾರಣವೇನು? | ನೀಲಸಂದ್ರ ಗ್ರಾಮದ ಸರ್ವೆ ನಂಬರ್ 79 ರ ದೇವಸ್ಥಾನದ ಜಾಗದ ನಕ್ಷೆ ಮತ್ತು ಗಡಿಯ ವಿವರಗಳು ಲಭ್ಯವಿಲ್ಲದಿದ್ದುದರಿಂದ, ಅನಧಿಕೃತ ಒತ್ತುವರಿದಾರರನ್ನು ಗುರುತಿಸಲು ನಿರ್ಧಿಷ್ಟವಾದ ದಾಖಲೆಗಳು ಇಲ್ಲವಾದ್ದರಿಂದ ಕೆಇಆರ್‌ಸಿ ಕಂಡಿಷನ್ ಆಫ್ ಪವರ್ ಸಪ್ಲೈ ನ ಸೆಕ್ಷನ್ 4ರನ್ವಯ ವಿದ್ಯುತ್ ಸಂಪರ್ಕ ನೀಡಲಾಗಿದೆ.<br>ಮುಂದುವರೆದು, ಕೆಇಆರ್‌ಸಿ ಕಂಡಿಷನ್ ಆಫ್ ಸಪ್ಲೈ ನ ಸೆಕ್ಷನ್ 4ರನ್ವಯ ಹಾಗೂ ದಾಖಲಾತಿಗಳ ಆಧಾರದ ಮೇಲೆ ಅರ್ಜಿ ನೋಂದಾಯಿಸಿದ ನಂತರ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದ್ದು, ಮುಜರಾಯಿ ಇಲಾಖೆಯ ಪತ್ರ ದಿನಾಂಕ 30.11.2020 ರ ನಂತರ ಯಾವುದೇ ಕಟ್ಟಡಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸದೇ ಇರುವುದರಿಂದ ಬೆಸ್ಕಾಂ ಅಧಿಕಾರಿಗಳ ವಿರುದ್ಧ ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲ. |

ಸಂಖ್ಯೆ: ಎನರ್ಜಿ 42 ಇಬಿಎಸ್ 2025

(ಕೆ.ಜೆ.ಜಾರ್ಜ್)
ಇಂಧನ ಸಚಿವರು 14/3/25